ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ನಂ:ಬಿ.ಸಿ.ಯು/ಶೈಕ್ಷಣಿಕ/ CBCS/11/2023-24 ದಿನಾಂಕ:11.10.2023

## ಸುತ್ತೋಲೆ

**ವಿಷಯ:** 2019–20ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಕೋರ್ಸುಗಳಿಗೆ CBCS Scheme ನ ಅಡಿಯಲ್ಲಿ ವ್ಯಾಸಂಗ NEP ಪದ್ಧತಿ ಜಾರಿಯಲ್ಲಿ ಬರುವ ಪೂರ್ವದಲ್ಲಿ ಪ್ರವೇಶ (Non-NEP) ಪಡೆದ ವಿದ್ಯಾರ್ಥಿಗಳಿಗೆ ಮರು ಪ್ರವೇಶ, ವರ್ಗಾವಣೆಗಳಿಗೆ ಅವಕಾಶ ನೀಡುವ ಬಗ್ಗೆ:

**ಉಲ್ಲೇಖ:** 1. ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ದಿನಾಂಕ:22.09.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11.10.2023

******

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ 2021–22ನೇ ಸಾಲಿನಲ್ಲಿ NEP ಹೊಸ ವ್ಯಾಸಂಗ ಪದ್ಧತಿ ಜಾರಿಗೆ ಬರುವ ಪೂರ್ವದಲ್ಲಿ (Non-NEP) ಸ್ನಾತಕ ಕೋರ್ಸುಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಅಧ್ಯಯನ ನಿಲ್ಲಿಸಿ ಮರು ಪ್ರವೇಶಾತಿ ಮತ್ತು ವರ್ಗಾವಣೆ ಪ್ರವೇಶ ಪಡೆಯಲು ಹಲವಾರು ವಿದ್ಯಾರ್ಥಿಗಳಿಂದ ಕೋರಿಕೆ ಪತ್ರಗಳು ಸಲ್ಲಿಕೆಯಾಗಿರುತ್ತವೆ.

2021–22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP-2020)ರನ್ವಯ ಸ್ನಾತಕ ಪದವಿ ಕೋರ್ಸುಗಳಿಗೆ ಸಂಬಂಧಿಸಿದಂತೆ ಹೊಸ ಪಠ್ಯಕ್ರಮ ಹಾಗೂ ನಿಯಮಗಳು ಜಾರಿಗೆ ಬಂದಿರುತ್ತದೆ. ಇದಕ್ಕೂ ಪೂರ್ವದಲ್ಲಿ Non-NEP Scheme ಅಡಿಯಲ್ಲಿ ಅಧ್ಯಯನ ಮಾಡಿ ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ, ಮರುಪ್ರವೇಶ ಕೋರುವ ವಿದ್ಯಾರ್ಥಿಗಳಿಗೆ CBCS ನಿಯಮಗಳಡಿಯಲ್ಲಿ 05 ವರ್ಷಗಳ ಅವಧಿಯೊಳಗೆ ವಿದ್ಯಾಭ್ಯಾಸವನ್ನು ಪೂರೈಸಿಕೊಳ್ಳಲು ಯು.ಜಿ.ಸಿ /ವಿಶ್ವದ್ಯಾನಿಲಯವು ನಿಗಧಿ ಪಡಿಸಲಾಗಿದೆ. ಅದರಂತೆ ವ್ಯಾಸಂಗ ಮಾಡಿ ಪದವಿ ಪಡೆಯಲು ಅನುಕೂಲ ಮಾಡಿಕೊಡಲು 2020–21ನೇ ಬ್ಯಾಚ್‌ನ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್ ಮರುಪ್ರವೇಶಾತಿ ಮತ್ತು 2019–20ನೇ ಬ್ಯಾಚ್‌ನ ವಿದ್ಯಾರ್ಥಿಗಳಿಗೆ 5ನೇ ಸೆಮಿಸ್ಟರ್ ವ್ಯಾಸಂಗಕ್ಕೂ CBCS Scheme ಅಡಿಯಲ್ಲಿ ಮರುಪ್ರವೇಶಾತಿ ಮಾಡಿಕೊಂಡು, CBCS Scheme ಪಠ್ಯಕ್ರಮದ ಪ್ರಕಾರ ಪ್ರತ್ಯೇಕ ತರಗತಿಗಳನ್ನು ನಡೆಸುವ ಕುರಿತು ಕಾಲೇಜಿನ ಪ್ರಾಂಶುಪಾಲರ ಒಪ್ಪಿಗೆಯ ಮೇರೆಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವ್ಯಾಸಂಗಗಳನ್ನು ಮುಂದುವರೆಸಲು ವಿಶ್ವವಿದ್ಯಾನಿಲಯದಿಂದ ಅನುಮತಿ ನೀಡಲಾಗಿದೆ.

| CBCS Scheme 2019-20 Batch | Course to be completed within 5 Years |
|---|---|
| 2019-20 Batch | 2023-24 |
| 2020-21 Batch | 2024-25 |

ಕುಲಸಚಿವರು

**ಗೆ,**

1. ಪ್ರಾಂಶುಪಾಲರು ಎಲ್ಲಾ ಸಂಯೋಜಿತ ಕಾಲೇಜುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

ಪ್ರತಿಗಳು:

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ.ಬೆಂಗಳೂರು.
2. ಎಲ್ಲಾ ನಿಕಾಯದ ಡೀನರು/ಮುಖ್ಯಸ್ಥರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಸಂಯೋಜಕರು, ಯು.ಯು.ಸಿ.ಎಮ್.ಎಸ್ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
4. ಅಂತರ್ಜಾಲದ ಪ್ರತಿ.
5. ಕಛೇರಿ ಪ್ರತಿ/ರಕ್ಷಾ ಕಡತ.